**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ.**

**ಎಸ್.ಸಿ. ನಂಃ 10012 / 2022**

**ಚಾಸಾ ಃ 1**

**ಪ್ರಾಸಾ ಃ 1**

**ಹೆಸರು** ಃ ತೇಜಸ್
ತಂದೆ **ಹೆಸರು** ಃ ಅಶ್ವಥ ನಾರಾಯಣ
**ವಯಸ್ಸು** ಃ 34 ವರ್ಷ
**ವೃತ್ತಿ** ಃ ವ್ಯಾಪಾರ
**ವಾಸ** ಃ ಯಲಹಂಕ

**ಈ ದಿನ ದಿನಾಂಕಃ 06.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದ ಃ**

1. ನ್ಯಾಯಾಲಯದ ಮುಂದೆ ಇರುವ ಆರೋಪಿತರು ಗೊತ್ತಿಲ್ಲ. ಚಾಸ-2 ನನ್ನ ತಂದೆ, ಚಾಸ-3 ಮತ್ತು 4 ಅಕ್ಕಂದಿರು, ಚಾಸ-5 ರಿಂದ 11 ರವರು ಗೊತ್ತಿಲ್ಲ. ರಾಜಾನುಕುಂಟೇ ಹೊನ್ನೇನಹಳ್ಳಿ ನಲ್ಲಿ ನಮ್ಮ ಬಾಬ್ತು ಶ್ರೀರಂಗ ಕಲ್ಯಾಣ ಮಂಟಪ್ಪ ಇದೆ. ನನ್ನ ಸ್ವಂತಕ್ಕೆ ಕಾರ್ ಸಂಖ್ಯೆ ಕೆಎ-50ಎಂಎ 0018 ವಾಹನವನ್ನು ಬಳಸುತ್ತಿದ್ದು, ಕಳೆದ 3 ವರ್ಷದ ಹಿಂದೆ ಅದನ್ನು ಸದರಿ ಕಲ್ಯಾಣ ಮಂಟಪದ ಕಾಂಪೌಂಡ್ ಒಳಗೆ ನಿಲಿಸಿದ್ದನು. ಮರು ದಿವಸ ಬೆಳಿಗ್ಗೆ ಎದ್ದು ನೋಡಿದ್ದಾಗ ಕಾರ್ ಸುಟ್ಟು ಹೋಗಿತ್ತು. ಕಾರಿಗೆ ಯಾರ ಬೆಂಕಿ ಹಚ್ಚಿದ್ದರು, ಹೇಗೆ ಸುಟ್ಟಿತ್ತು ಎಂದು ಗೊತ್ತಿಲ್ಲ. ಈ ವಿಚಾರವನ್ನು ನಾನು ಪೋಲಿಸರಿಗೆ ತಿಳಿಸಿದ್ದಾಗ ಅವರು ಸ್ಥಳಕ್ಕೆ ಬಂದು ಪರಿಶೀಲಿಸುತ್ತಿದ್ದಾಗ 2 ದಾಖಲೆಗಳಿಗೆ ನನ್ನ ಸಹಿ ಪಡೆದುಕೊಂಡಿದ್ದು, ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಗಿದೆ. ಪೋಲಿಸರ ಕೋರಿಕೆಯ ಮೇರೆಗೆ ಸಹಿ ಮಾಡಿದ್ದು, ಅದರಲ್ಲಿ ಏನು ಬರೆದಿಲ್ಲ ಎಂದು ನನಗೆ ತಿಳಿದಿಲ್ಲ. ನಾನು ಆರೋಪಿತರ ಕಾರಿಗೆ ಪೆಟ್ರೋಲ್ ಹಾಕಿ ಸುಟ್ಟಿ ಹಾಕಿರುವ ಸಂಬಂಧ ಯಾವುದೇ ದೂರನ್ನು ನೀಡಿಲ್ಲ.

**2.** ಆ ಸಮಯದಲ್ಲಿ ಪೋಲಿಸರು ನನ್ನ ಸಹಿಯನ್ನು ಇನ್ನೊಂದು ದಾಖಲೆಗೆ ಪಡೆದುಕೊಂಡಿದ್ದು, ಸ್ಥಳ ಮಹಜರ್ ನ್ನು ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಗಿದೆ. ನನ್ನನ್ನು ಪೋಲಿಸರು ಯಾವುದೇ ಸ್ಥಳಕ್ಕೆ ಹೋಗಿ ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿ ಪೋಟೋ ತೆಗೆದು ಯಾವುದೇ ವಸ್ತುವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಪೋಲಿಸರ ಕೋರಿಕೆಯ ಮೇರೆಗೆ ಸಹಿ ಮಾಡಿದ್ದು, ಸದರಿ ದಾಖಲೆಯಲ್ಲಿ ಏನು ಬರೆದಿದೆ ಎಂದು ನನಗೆ ತಿಳಿದಿಲ್ಲ.

**3.** ಸಾಕ್ಷಿಗೆ ಈಗ ಶೀಲ್ ಆದ ಪ್ಲಾಸ್ಟಿಕ್ ಕವರ್ ತೋರಿಸುತ್ತಿದ್ದು, ಅದರಲ್ಲಿ ಏನು ಇದೆ ಎಂದು ತಿಳಿದಿಲ್ಲ, ಅದರ ಮೇಲೆ ಇರುವ ಚೀಟಿಯಲ್ಲಿ ಸಾಕ್ಷಿಯ ಸಹಿಯನ್ನು ಮು ಮಾ 1 ರಿಂದ 10 ಎ ಎಂದು ಗುರುತಿಸಲಾಗಿದೆ. ಶೀಲಾದ ಪ್ಲಾಸ್ಟಿಕ್ ಕವರ್ ತೆಗೆದು ಅದರಲ್ಲಿರುವ ಮು ಮಾ ಗಳನ್ನು ನೋಡುತ್ತಿದ್ದು, ಯಾರಿಗೆ ಸಂಬಂಧಿಸಿದ್ದು, ಎಂದು ನನಗೆ ತಿಳಿದಿಲ್ಲ. ಅವುಗಳನ್ನು ಈ ಕೆಳಕಂಡಂತೆ ಗುರುತಿಸಲಾಗಿದೆ

1. ಒಂದು ಪ್ಲಾಸ್ಟಿಕ್ ಕವರ್ ನಲ್ಲಿರುವ ಒಂದು ಎನ್ವಲಫ್ ಕವರ್- ಮು ಮಾ 1
2. ಕಾರಿನ ಬಲ ಭಾಗದ ಸುಟ್ಟಿರುವ ವಾಹನದ ಸ್ವಾಬ್ - ಮು ಮಾ 2
3. ಕಾರಿನ ಹಿಂಭಾಗದ ಸುಟ್ಟಿರುವ ವಾಹನದ ಸ್ವಾಬ್ - ಮು ಮಾ 3
4. ಕಾರಿನ ಮುಂಭಾಗದ ಸುಟ್ಟಿರುವ ವಾಹನದ ಸ್ವಾಬ್ - ಮು ಮಾ 4
5. ಸುಟ್ಟಿರುವ ಕಾರಿನ ಒಳಭಾಗದ ಅವಶೇಷಗಳು - ಮು ಮಾ 5
6. ಸುಟ್ಟಿರುವ ಕಾರಿನ ಹೊರ ಭಾಗದ ಅವಶೇಷಗಳು - ಮು ಮಾ 6
7. ಸುಟ್ಟಿರುವ ಕಾರಿನ ಸ್ವಾಬ್ ಸಂಗ್ರಹಕ್ಕಾಗಿ ಉಪಯೋಗಿಸಿರುವ ಕಂಟ್ರೋಲ್ ಕಾಟನ್
   ಮು ಮಾ 7
8. 2 ಕೀನ್ಲೇ ಖಾಲಿ ಪ್ಲಾಸ್ಟಿಕ್ ಬಾಟಲ್‌ಗಳು ಒಟ್ಟಾಗಿ ಮು ಮಾ - 8
9. 1 ಲೀಟರ್ ನ ಪ್ಲಾಸ್ಟಿಕ್ ಬಾಟಲ್ ಮು ಮಾ -9

10. 2 ಕೇನ್ಗೇ  ಪ್ಲಾಸ್ಟಿಕ್ ಬಾಟಲ್ ಮುಚ್ಚಳಗಳು ಒಟ್ಟಾಗಿ ಮು ಮಾ - 10

11. ಬೆಂಕಿಯಿಂದ ಸುಟ್ಟು ಹೊಡೆದು ಹೋಗಿರುವ ಗ್ರಾನೈಟ್ ಕಲ್ಲಿನ ಚೂರುಗಳು ಮು ಮಾ-11

12. ಬೆಂಕಿಯಿಂದ ಸುಟ್ಟು ಹೊಡೆದು ಹೋಗಿರುವ ಕಿಟಕಿ ಗಾಜಿನ ಚೂರುಗಳು ಮು ಮಾ-12

**( ಈ ಹಂತದಲ್ಲಿ ಸಾಕ್ಷಿದಾರರು ಪ್ರತಿಕೂಲ ಸಾಕ್ಷಿಯಾಗಿ ಸಾಕ್ಷಿ ನುಡಿದಿದ್ದರಿಂದ ವಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)**

**ವಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

**4.** ದಿನಾಂಕ **04.11.2021** ರಂದು ಬೆಳಿಗ್ಗೆ **5-00** ಗಂಟೆ ಸಮಯಕ್ಕೆ ನ್ಯಾಯಾಲಯದ ಮುಂದೆ ಇರುವ 1ನೇ ಆರೋಪಿ ನನ್ನ ಮತ್ತು ಚಾಸ-2 ರವರಿಗೆ ತಾನು ಕೇಂದ್ರ ಕಾರಗೃಹದಿಂದ ಜಾಮೀನು ಪಡೆದು ಹಣವನ್ನು ಕೊಡುವಂತೆ ಪದೇ ಪದೇ ಬಲವಂತದಿಂದ ಕೇಳಿದ್ದು, ಹಣ ಕೊಡದೇ ಇದ್ದರೇ ನನ್ನ ಕಡೆಯ ಹುಡುಗರನ್ನು ಬಿಟ್ಟು ನಿಮ್ಮ ಮನೆ, ಕಲ್ಯಾಣ, ಕಾರ್ ಸುಟ್ಟು ಹಾಕುವುದಾಗಿ ಮೊಬೈಲ್ ಮೂಲಕ ಕರೆ ಮಾಡಿ ನಮಗೆ ಅವಾಚ್ಯ ಶಬ್ದದಿಂದ ಬೈದು ಜೀವ ಬೆದರಿಕೆ ಹಾಕಿದ್ದು, ಉಳಿದ 2 ರಿಂದ 7ನೇ ಆರೋಪಿತರ ಜೊತೆ ಒಳಸಂಚು ನಡೆಸಿ ನನ್ನ ಕಲ್ಯಾಣ ಮಂಟಪಕ್ಕೆ ಹೋಗಿ ನನ್ನ ಕಾರಿಗೆ ಪೆಟ್ರೋಲ್ ಹಾಕಿ ಬೆಂಕಿ ಇಟ್ಟು ಹಾಕಲು ಪಿತ್ತೂರು ಮಾಡಿದ್ದು, ಅದರಂತೆ ಎಲ್ಲಾ ಆರೋಪಿತರು ಗುಂಪು ಕಟ್ಟಿಕೊಂಡು, ನನ್ನ ಕಾರ್ ಸಂಖ್ಯೆ ಕೆಎ-50ಎಂಎ-0018 ಗೆ ಪೆಟ್ರೋಲ್ ಹಾಕಿ ಬೆಂಕಿ ಇಟ್ಟು ಸುಟ್ಟು ಹಾಕಿರುತ್ತಾರೆಂದರೆ ಸರಿಯಲ್ಲ. ಘಟನೆ ಕುರಿತು ಈಗ ಓದಿ ಹೇಳಿದಂತೆ ನಿಪಿ-1 ರಂತೆ ಪೋಲಿಸರಿಗೆ ದೂರನ್ನು ನೀಡಿರುತ್ತೇನೆಂದರೆ ಸರಿಯಲ್ಲ.

**5.** ದೂರು ನೀಡಿದ ನಂತರ, ದಿನಾಂಕ **04.11.2021** ರಂದು ಪೋಲಿಸರು ಚಾಸ-16 ಹಾಗೂ 17

ಇರವರನ್ನು ಕರೆಯಿಸಿ ನಾನು ತೋರಿಸಿ ಘಟನಾ ಸ್ಥಳವಾದ ಹೊನ್ನೇನಹಳ್ಳಿ ಗ್ರಾಮದ ಸರ್ವೆ ನಂಬರ್ 136 ರ ಜಮೀನಿನಲ್ಲಿರುವ ಬೆಂಗಳೂರು- ದೊಡ್ಡಬಳ್ಳಾಪುರ ಮುಖ್ಯ ರಸ್ತೆಯ ಪಕ್ಕದಲ್ಲಿರುವ ಶ್ರೀರಂಗ ಕಲ್ಯಾಣ ಮಂಟಪದಲ್ಲಿ ನ್ಯಾಯಾಲಯದ ಮುಂದೆ ಇರುವ ಮು ಮಾ 12 ವಸ್ತುಗಳನ್ನು ಪೋಲಿಸರು ಮುಂದಿನ ತನಿಖೆಗಾಗಿ ಅಮಾನತ್ತುಪಡಿಸಿಕೊಂಡು ನಿಪಿ-2 ರಂತೆ ಮಹಜರ್ ನ್ನು ಮಧ್ಯಾಹ್ನ 12-00 ರಿಂದ 1-30 ವರೆಗೆ ಮಾಡಿ ಪೋಟೋ ತೆಗೆದು ಬರೆದು ಓದಿ ಹೇಳಿದ್ದಾಗ ಸರಿ ಇದೆ ಎಂದು ಸಹಿ ಮಾಡಿದ್ದೇನೆಂದರೆ ಸರಿಯಲ್ಲ.

6. ಘಟನೆ ಬಗ್ಗೆ ಹಾಗೂ ಮಹಜರ್ ನ ಎಲ್ಲಾ ವಿಷಯ ತಿಳಿದಿದ್ದರೂ ಕೂಡ ಈಗ ಆರೋಪಿತರೊಂದಿಗೆ ರಾಜೀ ಆಗಿರುವುದರಿಂದ ಸದರಿಯವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

(ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ